

ಖುರ್ದಿಷ್ ಯೋಧೆ

## ಸದ್ದಿಲ್ಲದೆ ಕಾರ್ಯಸಾಧನೆ

ಸಿರಿಯಾದ ನಮ್ಮ ಪ್ರಯಾಣ ಒಟ್ಟು ಎಂಟು ದಿನಗಳದ್ದು. ಅಲ್ಲಿ ನಾವು ಆರು ದಿನ ಸುತ್ತಾಟದ ಯೋಜನೆ ರೂಪಿಸಿದ್ದೆವು. ಸಮಯ ತುಂಬ ಕಡಿಮೆಯಿತ್ತು. ನಾವು ಎಲ್ಲೂ ನಮ್ಮನ್ನು ಗುರ್ತಿಸಿಕೊಳ್ಳಬಾರದು ಎಂದು ಯೊಚಿಸಿದ್ದೆವು. ಯಾರಿಗೂ ಟಾರ್ಗೆಟ್ ಆಗದಂತೆ ಸೂಕ್ಷ್ಮವಾಗಿ ನಮ್ಮ ಕಾರ್ಯಸಾಧನೆ ಮಾಡಿಕೊಂಡು ಬರಬೇಕಿತ್ತು. ಐಸಿಸ್ ಈ ಹಿಂದೆ ಅಮೆರಿಕದ ಅನೇಕ ಪತ್ರಕರ್ತರನ್ನು ಹತ್ಯೆ ಮಾಡಿದ್ದು ಗೊತ್ತಿತ್ತು. ನನಗೆ ತಿಳಿದಂತೆ ಐಸಿಸ್ ನೇರವಾಗಿ ಯಾರನ್ನೂ ಅಪಹರಿಸುವುದಿಲ್ಲ. ಅಲ್ಲಿ ಹಣಕ್ಕಾಗಿ ಅಪಹರಿಸುವ ಮಾಫಿಯಾ ಇದೆ. ಅದು ಜನಸಾಮಾನ್ಯರಂತೆಯೇ ಇರುತ್ತದೆ. ಐಸಿಸ್ ಹೇಳಿದ ಜನಾಂಗದ ಪ್ರತಿನಿಧಿಗಳನ್ನು ಅಪಹರಿಸಿ ಅವರಿಂದ ಹಣ ಪಡೆಯುತ್ತದೆ. ಆ ಅಪಹೃತರನ್ನು ಒತ್ತೆ ಇಟ್ಟುಕೊಂಡು ನಂತರ ಐಸಿಸ್ ತನ್ನ ಬೇಡಿಕೆಗಳನ್ನು ಈಡೇರಿಸಿಕೊಳ್ಳುತ್ತದೆ.



ಭಾನುಪ್ರಕಾಶ ಚಂದ್ರ

ಲೈಂಗಿಕ ದೌರ್ಜನ್ಯಕ್ಕಾಗಿ ಯಾಜಿದಿ ಹುಡುಗಿಯರನ್ನು ಅಪಹರಿಸಿದವರೂ ಅವರೇ. ಯಾಜಿದಿಗಳು ಮುಸ್ಲಿಮರೂ ಅಲ್ಲ, ಕ್ರೈಸ್ತರೂ ಅಲ್ಲ. ಅದು ಬೇರೆಯದೇ ಆದ ಜನಾಂಗ. ಅಪಹೃತ ಮಹಿಳೆಯರನ್ನು ಲೈಂಗಿಕವಾಗಿ ನಿರಂತರವಾಗಿ ಶೋಷಿಸುತ್ತಾರೆ. ಅವರಿಗೆ ಬೇಡ ಎಂದರೆ ಮತ್ತೊಬ್ಬರಿಗೆ ಹಸ್ತಾಂತರಿಸುತ್ತಾರೆ.



ಕ್ರೌರ್ಯದ ಅಟ್ಟಹಾಸಕ್ಕೆ ಅಂತ್ಯ ಹಾಡಿದ್ದರೂ ಶಾಂತಿಯ ದಿನಗಳು ಇನ್ನೂ ಅಲ್ಲಿ ಕನಸಿನ ಬಾಬತ್ತಾಗಿಯೇ ಉಳಿದಿದೆ. ಜಗತ್ತಿನಲ್ಲಿ ಅತ್ಯಂತ ಹೆಚ್ಚು ಹಿಂಸಾಚಾರಕ್ಕೆ ತುತ್ತಾಗಿರುವ ನೆಲ ಎಂದರೆ ಅದು ಸಿರಿಯಾ. ಮೆಸಪಟೋಮಿಯಾ ನಾಗರಿಕತೆಗೆ ಒಡಲು ನೀಡಿದ ಯೂಫ್ರಟಿಸ್ ಮತ್ತು ಟೈಗ್ರಿಸ್ ನದಿ ಬಯಲಿನ ತಪ್ಪಲು, ಈಗ ರಕ್ತದ ಮಡುವಿನಲ್ಲಿ ಹೆಪ್ಪುಗಟ್ಟಿದೆ.

## ಸಿರಿಯಾ ಪಯಣದ ಕಥನ

ಈ ನಮ್ಮ ಕೆಲಸಕ್ಕೆ ಆರು ತಿಂಗಳ ಹಿಂದೆಯೇ ನೀಲನಕ್ಷೆ ತಯಾರಾಗಿತ್ತು. ಕಾಲ ಕೂಡಿಬರುವುದು ಮಾತ್ರ ತಡವಾಯಿತು. ಸಿರಿಯಾ ಅತ್ಯಂತ ಸಂಕೀರ್ಣ ದೇಶ. ನಾವು ಭೇಟಿ ನೀಡಿದ, ಐಸಿಸ್ ಪ್ರಾಬಲ್ಯ ಸಾಧಿಸಿದ ಪ್ರದೇಶ ಭೌಗೋಳಿಕವಾಗಿ ಸಿರಿಯಾಕ್ಕೆ ಒಳಪಟ್ಟಿದೆ. ಆದರೆ, ಅದನ್ನು ಈಗ ಖುರ್ದಿಷ್ ಜನಾಂಗ ತನ್ನ ಹಿಡಿತಕ್ಕೆ ತೆಗೆದುಕೊಂಡಿದೆ. ಒಂದು ವರ್ಷದ ಹಿಂದೆ ಐಸಿಸ್ ಉಗ್ರರ ವಶದಲ್ಲಿ ಆ ಭೂಪ್ರದೇಶವಿತ್ತು. ಸಿರಿಯಾ ಅಧ್ಯಕ್ಷ ಬಷರ್ ಅಸಾದ್ ಆಡಳಿತ ಹಾಗೂ ಖುರ್ದಿಷ್‌ಗಳ ನಡುವೆ ಶೀತಲ ಸಮರ ಇದೆ. ಅವರಿಬ್ಬರನ್ನೂ ಸೇರಿದಂತೆ ಇಡೀ ಜಗತ್ತಿಗೆ ರಕ್ಕಸರೂಪಿಯಾಗಿ ಕಾಡಿದ್ದ ಐಸಿಸ್ ಈಗ ಮೊದಲಿನಂತೆ ಪ್ರಬಲವಾಗಿ ಉಳಿದಿಲ್ಲ. ಖುರ್ದಿಷಿಗರು ತಮ್ಮನ್ನು ತಾವು ಸಿರಿಯನ್ ಎಂದು ಭಾವಿಸುತ್ತಾರೆ. ಬುಡಕಟ್ಟು ಹಿನ್ನೆಲೆಯ ಅವರು ರಾಜಕೀಯವಾಗಿ ಸ್ವಾಯತ್ತತೆಯನ್ನು ಬಯಸುತ್ತಾರೆ. ಟರ್ಕರಿಗೂ ಖುರ್ದಿಷ್‌ರಿಗೂ